ಎಷ್ಟು ಅಸ್ಥಿರ ಎಂಬುದನ್ನು ಕಲಿಸುತ್ತದೆ. ಅಪಾರ ಸಂತಸ ಮತ್ತು ಕಠಿಣ ದುಃಖದ ಸಮಯದಲ್ಲಿ ಮನುಷ್ಯ ಇನ್ನೊಬ್ಬರೊಂದಿಗಿನ ತನ್ನ ದ್ವೇಷವನ್ನು ಮರೆತು ಬಿಡುತ್ತಾನೆ. ಆದರೂ ಏಕಿಷ್ಟು ಜಿಗುಪ್ಸೆ? ಏಕಿಷ್ಟು ದುಃಖ? ಈ ಜೀವನ ತುಂಬಾ ಚಿಕ್ಕದು. ಎಲ್ಲವೂ ಶಾಶ್ವತವಾಗಿರುವುದಿಲ್ಲ.

ನೀನಾಳೊಂದಿಗಿನ ನನ್ನ ಸಂಬಂಧಕ್ಕೆ ಯಾವುದೇ ಹೆಸರು ಕೊಡಲಾಗದು. ನಮ್ಮಿಬ್ಬರಿಗೆ ಜನಿಸಿದ ಮಕ್ಕಳಿಲ್ಲ. ಆದರೂ ನಾನು ಅವಳ ಕೊನೆಯ ಗಳಿಗೆಯಲ್ಲಿ ಅವಳ ಅತಿ ಸಮೀಪದ ವ್ಯಕ್ತಿಯಾಗಿದ್ದೆ, ಇದನ್ನು ಅವಳ ಪುತ್ರಿಯರೂ ಒಪ್ಪಿದರು, ಅವಳ ತಂದೆತಾಯಿಯೂ ಒಪ್ಪಿದರು, ಅವಳ ಸಮಾಜವೂ ಒಪ್ಪಿತು.

ನಾನು ಡಾಕ್ಟರ್ ರಾಮಚಂದ್ರರು ಒಂದು ಮೂಲೆಯಲ್ಲಿ ಒಂಟಿಯಾಗಿ ಕೂತಿರುವುದನ್ನು ನೋಡಿದೆ. ನಾನು ಸಹ ಉದಾಸೀನನಾಗಿದ್ದೆ. ಅವರ ಬಳಿಗೆ ಹೋದೆ. ಅವರ ಕೈಕುಲುಕುತ್ತಾ ಅವರ ಮೊಮ್ಮಗಳ ವಿವಾಹಕ್ಕೆ ಶುಭ ಹಾರೈಸಿದೆ; ಇದನ್ನು ಅವರು ಮೆಲ್ಲನೆ ತಲೆಯಾಡಿಸಿ ಸ್ವೀಕರಿಸಿದರು.

‘ನೀವು ವಿವಾಹಕ್ಕೆ ತುಂಬಾ ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದೀರ. ವಂಡರಫುಲ್!’ ನಾನು ಪ್ರಶಂಸಿಸಿದೆ.

‘ಇಂದಿನ ಪತ್ರಿಕೆಯಲ್ಲಿ, ಭಾರತದಲ್ಲಿ ಅರೇಂಜ್ಡ್ ಮ್ಯಾರೇಜ್ ತನ್ನ ರೆಸ್ಪೆಕ್ಟ್ ಕಳೆದುಕೊಳ್ಳುತ್ತಿದೆ ಎಂದು ಬಂದಿದೆ. ತನಗೆ ಲೈಫ್‌ಪಾರ್ಟನರ್ ಹುಡುಕಿಕೊಳ್ಳಲಾರದವ, ಯಾವುದಕ್ಕೂ ಯೋಗ್ಯನಲ್ಲ’ ಅವರು ನನಗೆ ಹೇಳಿದರು.

‘ಸರಿ, ಭಾರತ ಬದಲಾಗುತ್ತಿದೆ...’

‘ಇಂಡಿಯಾ, ಸ್ಪೇಸ್‌ನಲ್ಲಿ ‘ಮಾರ್ಸ್ ಆರ್ಬಿಟರ್ ಮಿಶನ್’ ಬಿಟ್ಟಿದೆ; ಮಂಗಳಾಯನ್ ಅಂತರಿಕ್ಷದಲ್ಲಿ ಪ್ರದಕ್ಷಿಣೆ ಹಾಕುತ್ತಿದೆ...’ ಅವರು ಚಪ್ಪಾಳೆ ತಟ್ಟುತ್ತಾ ಹೇಳಿದರು, ‘ಓಹ್ ನಮ್ಮ ದೇಶದಲ್ಲಿ ಸದಾ ಒಂದಲ್ಲ ಒಂದು ರೋಮಾಂಚಕಾರಿ ಘಟನೆ ಘಟಿಸುತ್ತದೆ. ನಿಮ್ಮ ದೇಶಗಳಲ್ಲಿ ನಿತ್ಯದ ಸಂಗತಿಗಳಷ್ಟೇ’.

ಅವರು ನನ್ನೊಂದಿಗೆ ಅಸಂಬದ್ಧದ ಮಾತುಗಳನ್ನಾಡುತ್ತಿದ್ದರು, ಅವರ ಆ ಮಾತುಗಳು ವಿವಾಹ ಸಮಾರಂಭವನ್ನು ಹೊರತುಪಡಿಸಿದ್ದವು. ನಾನೇನೋ ಹೇಳುತ್ತಿದ್ದೆ, ಅವರೇನೋ ಹರಟುತ್ತಿದ್ದರು. ಅವರು ನನಗೆ ಹುಚ್ಚರಂತೆ ಕಂಡರು. ನೀನಾಳ ಕಾಯಿಲೆ ಅವರನ್ನು ಶೀಲಾ ದೇವಿಯವರಿಗಿಂತ ಹೆಚ್ಚು ಗಾಸಿಗೊಳಿಸಿತ್ತು. ಅವರು ನನಗೆ ಪ್ರತಿ ಕ್ಷಣ ಅಮಾಯಕರಂತೆ, ಗುಂಪಿನಲ್ಲಿ ಒಂಟಿಯಾಗಿರುವಂತೆ ಕಾಣುತ್ತಿದ್ದರು. ಅವರ ಕಣ್ಣುಗಳು ಶೂನ್ಯವಾಗಿದ್ದವು; ಅವರ ಮನಸ್ಸು ಹೀನಭಾವನೆಯಿಂದಲೋ ಅಥವಾ ಅಸಹಾಯಕತೆಯಿಂದಲೋ ಪರಿತಪಿಸುತ್ತಿತ್ತು. ಅವರಿಗೆ ಯಾರ ಅವಶ್ಯಕತೆ ಸಹ ಇಲ್ಲ ಎಂದು ತೋರುತ್ತಿತ್ತು.

‘ಇವತ್ತು ವಿಶೇಷ... ನಿಮ್ಮ ಮೊಮ್ಮಗಳ ಸ್ವಯಂವರ...’ ನಾನು ಹುರಿದುಂಬಿಸಿದೆ.

‘ಊಹೂಂ. ನಿತ್ಯದ ಸಂಗತಿಗಳು...’ ಅವರು ಕೈ ಜಾಡಿಸಿದರು.

‘ಮದುವೆಮುಂಜಿ ನಿತ್ಯದ ಸಂಗತಿಗಳಾದರೆ, ವಿಶೇಷ ವಿಷಯವೇನು?’

‘ಇಂದಿನ ವಿಶೇಷ ಸಂಗತಿ ಎಂದರೆ, ಭಾರತದ ಯಂತ್ರಗಳು ಮಂಗಳವನ್ನು ಪ್ರವೇಶಿಸಿದೆ.’

‘ಅಂದರೆ, ಭಾರತ ಅಂತರಿಕ್ಷವನ್ನು ಕಂಡುಹಿಡಿಯುತ್ತಿದೆ...’ ನಾನು ಅವರೊಂದಿಗೆ ತಮಾಷೆಯ ಮೂಡ್‌ಗೆ ಬಂದೆ. ‘ಹೇಳಲಾ..’ ಅವರು ಉತ್ತೇಜಿತರಾಗಿ ಹೇಳಿದರು, ‘ನಮ್ಮ ಪ್ರಾಚೀನ ಸಂಸ್ಕೃತದ ಪುಸ್ತಕಗಳಲ್ಲಿ ಇಂದಿನ ಟೆಕ್ನಾಲಜಿಗಳ ಉಲ್ಲೇಖವಿದೆ. ಭಾರತಕ್ಕೆ ಬೇರೇನೂ ಮಾಡುವ ಅವಶ್ಯಕತೆಯಿಲ್ಲ. ಆದರೆ ಅವುಗಳನ್ನು ಅನುವಾದಿಸಿ ವಿಶ್ವದ ವಿಜ್ಞಾನಿಗಳೆದುರು ಇಡಬೇಕು’ ಎನ್ನುತ್ತಾ ಅವರು ಹೋಹೋ ಎಂದು ನಕ್ಕರು.

ನಾನು ಅವರನ್ನು ಆಶ್ಚರ್ಯದಿಂದ ನೋಡಿದೆ.

ಬೆಳದಿಂಗಳು ಒಮ್ಮೆ ನನ್ನೆದುರಿಗೆ ಚೆಲ್ಲಿದರೆ, ಇನ್ನೊಮ್ಮೆ ಎಡಗಡೆಗೆ ಚೆಲ್ಲುತ್ತಿದೆ. ಇಂದು ಹುಣ್ಣಿಮೆ. ಈಚೆಗೆ ನಾನು ಆರನೆಯ ತರಗತಿಯ ವಿದ್ಯಾರ್ಥಿಗಳಿಗೆ ‘ಸೌರ ಮಂಡಲ ಮತ್ತು ಅಂತರಿಕ್ಷ’ದ ಪಾಠವನ್ನು ಬೋಧಿಸುತ್ತಿದ್ದೇನೆ. ಸೂರ್ಯ, ಚಂದ್ರ, ನಕ್ಷತ್ರಗಳು ಮತ್ತು ಆಕಾಶಗಂಗೆಗಳನ್ನು ತಿಳಿದುಕೊಳ್ಳಲು ಮಕ್ಕಳು ತುಂಬಾ ಉತ್ಸಾಹವನ್ನು ತೋರುತ್ತಾರೆ. ಗ್ರಹಗಳ ಪ್ರದಕ್ಷಿಣೆ. ಸೂರ್ಯ,ಭೂಮಿ, ಚಂದ್ರರ ಅದ್ಭುತ ಸಂಬಂಧ, ಇವು ಕುತೂಹಲದ ವಿಷಯವಾಗಿವೆ.

ಬ್ರಹ್ಮಾಂಡ ಒಂದು ಮಹಾನ್ ಘಟನೆಯಾಗಿದೆ. ಇದು ಹೇಗೆ ಅಸ್ತಿತ್ವಕ್ಕೆ ಬಂತು, ಇದನ್ನು ನಿರ್ಮಿಸಿದವರು ಯಾರು? ಇದರ ಅಸ್ತಿತ್ವದ ಸಾರವೇನು? ವಿಜ್ಞಾನಿಗಳು ಅಂತರಿಕ್ಷಕ್ಕೆ ಎಷ್ಟೇ ವಾಹನಗಳನ್ನು ಕಳುಹಿಸಿದ್ದಾಗ್ಯೂ, ಆ ವಿರಾಟ ಮತ್ತು ಉತ್ಕೃಷ್ಟ ರಚನೆಯನ್ನು ಅರಿಯಲು ಮನುಷ್ಯನ ಮಿತಿಗಳು ಸೀಮಿತವಾಗಿವೆ. ಇಂದಿಗೂ ಸೃಷ್ಟಿ ಒಂದು ರಹಸ್ಯವಾಗಿದೆ. ನನಗೇ ಸ್ಪಷ್ಟ ಅರಿವಿಲ್ಲದ ವಿಷಯವನ್ನು ಬೋಧಿಸುವುದು ನನಗೊಂದು ಚಾಲೆಂಜ್ ಆಗಿದೆ. ಮಕ್ಕಳಿಗೆ ಏನು ಬೋಧಿಸುವುದು? ಎಲ್ಲರೂ ತಿಳಿದ ಅದೇ ಪೊಳ್ಳು ವಿಷಯಗಳು. ಆದರೆ ನಾನು ಬೇರೆ ವಿಧಾನಗಳಿಂದ ಹೇಳಲು ಪ್ರಯತ್ನಿಸುತ್ತೇನೆ.

ನಮ್ಮ ಭೂಮಿಯ ಸ್ಥಿತಿ ಇಡೀ ಬ್ರಹ್ಮಾಂಡದಲ್ಲಿ ತುಂಬಾ ನಾಜೂಕಾಗಿದೆ; ಅದು ತನ್ನ ಅಕ್ಷ ಮತ್ತು ಸೂರ್ಯನ ಸುತ್ತಮುತ್ತ ಸುತ್ತುತ್ತಿದೆ. ಚಂದ್ರ ಭೂಮಿಯನ್ನು ಸುತ್ತು ಹಾಕುತ್ತಿದ್ದಾನೆ. ಒಂದು ವೇಳೆ ಸೂರ್ಯ, ಭೂಮಿ ಮತ್ತು ಚಂದ್ರ ತಮ್ಮ ಪರಸ್ಪರ ಸಂಬಂಧಗಳನ್ನು ನಿಯೋಜಿಸಿಕೊಳ್ಳದಿದ್ದರೆ ಪ್ರಳಯವಾಗುವುದು, ಸರ್ವನಾಶವಾಗುವುದು.

ಮಕ್ಕಳಿಗೆ ಆಶ್ಚರ್ಯವಾಗುತ್ತದೆ; ಎಲ್ಲವೂ ತಿರುಗುತ್ತಿರುವಾಗ, ಎಲ್ಲವೂ ಸ್ಥಿರವಾಗಿರುವಂತೆ ಏಕೆ ಅನ್ನಿಸುತ್ತದೆ?

ಪೂರ್ಣ ಗತಿಯನ್ನು ಅರ್ಥ ಮಾಡಿಕೊಳ್ಳುವ ಅಂಗಗಳು ಮನುಷ್ಯನ ಬಳಿಯಿಲ್ಲ. ನಾವು ಕೇವಲ ಸಾಪೇಕ್ಷದ ಗತಿಯನ್ನು ಮನಗಾಣುತ್ತೇವೆ. ಅಥವಾ ವೇಗ ಪರಿವರ್ತನೆಗಳನ್ನು ಅರಿಯಬಲ್ಲೆವು. ಒಂದು ವೇಳೆ ಎಲ್ಲವೂ ನಮ್ಮೆದುರು ಸ್ಥಿರ ಗತಿಯೊಂದರ ಪ್ರಕಾರ ತಿರುಗುತ್ತಿದ್ದರೆ, ಆ ಗತಿಯನ್ನು ನಾವು ಅನುಭವಿಸಲಾರೆವು.

ಆದರೆ ಎಲ್ಲವೂ ಸ್ಥಿರವಿಲ್ಲ, ಎಲ್ಲವೂ ಮುಕ್ತವೂ ಇಲ್ಲ. ಈ ಲೋಕ ಪರಲೋಕದಲ್ಲಿ ಎಲ್ಲವೂ ಚಲನೆಯುಳ್ಳವು... ಪದಾರ್ಥಗಳ ಒಳಗೆ ಅಣು ಪರಮಾಣು ಸ್ಪಂದಿಸುತ್ತವೆ, ಶರೀರದೊಳಗೆ ವಾಯು, ರಕ್ತ ಮತ್ತು ದ್ರವ ಪದಾರ್ಥಗಳು ತಿರುಗುತ್ತಿವೆ. ಆದರೆ ಎಲ್ಲವೂ ಒಂದು ಆಕರ್ಷಣೆಯ ಬಲದಲ್ಲಿ ಬಂಧಿಸಲ್ಪಟ್ಟಿವೆ, ಹೀಗಾಗಿ ಸ್ಪಂದಿಸುವಾಗಲೂ ತಮ್ಮ ಮಾರ್ಗದಿಂದ ಚಲಿಸುವುದಿಲ್ಲ. ಅಂತರಿಕ್ಷದಲ್ಲಿ ನರ್ತಿಸುವ ಗ್ರಹಗಳು ಸಹ ಸೂರ್ಯನ ಆಕರ್ಷಣೆಯಲ್ಲಿ ಬಂಧಿಸಲ್ಪಟ್ಟಿವೆ.

ಎಲ್ಲವೂ ಸ್ಥಿರ ಅಥವಾ ಮುಕ್ತವಾದಾಗ ಎಲ್ಲವೂ ಕೊನೆಗೊಳ್ಳುತ್ತವೆ, ಪ್ರಾಣ ಹೋದ ನಂತರ ನೀನಾ ನಿಶ್ಚಲಳಾದಂತೆ... ಡಾಕ್ಟರ್ ರಾಮಚಂದ್ರರು ಹೇಳಿದ್ದರು, ‘ಪತಿ ಪತ್ನಿ ಜಗಳವನ್ನು ನಿಲ್ಲಿಸಿದಾಗ, ಅವರ ನಡುವೆ ಎಲ್ಲವೂ ಕೊನೆಯಾಗುತ್ತದೆ. ಜಗಳ ಅವರ ಸಂಬಂಧಗಳನ್ನು ಚಾಲನೆಯಲ್ಲಿಡುತ್ತದೆ.’

‘ನೀವು ಏನನ್ನು ಬೋಧಿಸುತ್ತೀರ?’ ನಾನೊಬ್ಬ ಶಾಲಾ ಅಧ್ಯಾಪಕ ಎಂದಾಗ ನೀನಾ ಈ ಪ್ರಶ್ನೆ ಕೇಳಿದ್ದಳು.

‘ಚರಿತ್ರೆ ಮತ್ತು ಭೂಗೋಳವನ್ನು ಬೋಧಿಸುತ್ತೇನೆ. ಈ ಎರಡೂ ವಿಷಯಗಳು ನನ್ನ ಟೂರ್ ಗೈಡ್ ಉದ್ಯೋಗಕ್ಕೆ ಸಂಬಂಧಿಸಿವೆ. ಭೂಗೋಳ ಮತ್ತು ಚರಿತ್ರೆ ಪರಸ್ಪರ ಪೂರಕವಾಗಿದ್ದು, ಪರಸ್ಪರ ಅವಲಂಬಿಸಿವೆ. ಚರಿತ್ರೆಯಲ್ಲಿ ನಾವು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವಿಕಾಸವನ್ನು ಅಧ್ಯಯನ ಮಾಡುತ್ತೇವೆ. ಭೂಗೋಳದಲ್ಲಿ ಸ್ಥಳಗಳ ಗುರುತು, ವಿಶೇಷತೆಗಳು ಮತ್ತು ಅಂತರವನ್ನು ಅರಿಯಬಹುದು. ಚರಿತ್ರೆಯಲ್ಲಿ ಘಟನೆಗಳು, ದಿನಾಂಕಗಳಿಗೆ ಮಹತ್ವವಿದೆ; ಭೂಗೋಳದಲ್ಲಿ ಸ್ಥಳಗಳಿಗೆ ಮಹತ್ವವಿದೆ. ಚರಿತ್ರೆಯಲ್ಲಿ ಕಾಲ ಮತ್ತು ಭೂಗೋಳದಲ್ಲಿ ಕ್ಷೇತ್ರ ಮತ್ತು ಅಂತರಿಕ್ಷಕ್ಕೆ ಮಹತ್ವವಿದೆ. ಕ್ಷೇತ್ರ ಮತ್ತು ಕಾಲ, ಸ್ಥಳ ಮತ್ತು ಘಟನೆಗಳು ವಾಸ್ತವವಾಗಿ ಚರಿತ್ರೆ ಮತ್ತು ಭೂಗೋಳವನ್ನು ಪರಸ್ಪರ ಜೋಡಿಸುತ್ತವೆ.’

‘ಚೆನ್ನಾಗಿ ಬೋಧಿಸುತ್ತೀರ’ ಅವಳು ಹೊಗಳಿದ್ದಳು. ಆದರೆ ಇದಾದ ಎರಡು ವರ್ಷಗಳ ನಂತರ ನಾನು ಒಂದು ದಿನ ಮನೆಯಲ್ಲಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ನೋಡುತ್ತಿದ್ದಾಗ, ನೀನಾ ಅದರಲ್ಲಿ ಅವರು ಬರೆದ ನಕ್ಷೆಯನ್ನು ನೋಡಿ ಸಿಡಿಮಿಡಿಗೊಂಡು ಹೇಳಿದ್ದಳು, ‘ಚರಿತ್ರೆ ಮತ್ತು ಭೂಗೋಳ ನನಗೆಂದೂ ಇಷ್ಟವಾದ ವಿಷಯಗಳಾಗಿರಲಿಲ್ಲ.’

‘ನೀನು ಎಂಜಿನಿಯರ್ ಹುಡುಗಿ, ಕೇಂಬ್ರಿಜ್‌ನಲ್ಲಿ ಓದಿದ್ದೀಯ...’ ನಾನು ವ್ಯಂಗ್ಯವಾಡಿದೆ.

‘ನೀನು ಫಸ್ಟ್ ಕ್ಲಾಸ್ ಇನ್‌ಸ್ಟಿಟ್ಯೂಟ್‌ನಿಂದ ಫಸ್ಟ್ ಕ್ಲಾಸ್ ವಿಷಯವನ್ನು ಓದಿದ್ದೀಯ, ಫಸ್ಟ್ ಕ್ಲಾಸ್ ಕಂಪನಿಯಲ್ಲಿ ಫಸ್ಟ್ ಕ್ಲಾಸ್ ಜಾಬಿನಲ್ಲಿದ್ದೀಯ...’

ನಾನು ನನ್ನ ಮಿತ್ರರು ಮತ್ತು ಸಂಬಂಧಿಕರ